ಶ್ರೀ ಪ್ರಭಾಕರ್ ತೇಲ್ಕರ್.—ಇವರು ಡಿಡಿಟಿ ಸ್ಪ್ರೆ ಮಾಡುತ್ತಿದ್ದಾರೆ, ಅದರಿಂದ ಸೊಳ್ಳೆಗಳು ಇವ ಸ್ಟನ್ ಆಗಿದೆ. ಇದಕ್ಕೆ ಬೇರೆನಾದಾರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೆ Due to this mosquito menace, it has become difficult for the people to continue their life. Will the Government just think of using the special funds given to Karnataka by the Centre in Gulbarga City ?

ಶ್ರೀ ಧರ್ಮಸಿಂಗ್.—ನಮಗೆ ಸೆಂಟರ್‌ನಿಂದ ಫಂಡ್ ಕೂಡಾ ಸಿಕ್ಕುತ್ತಿದೆ, ಇದನ್ನು ಬೇರೆ ಯಾವ ರೀತಿಯಿಂದ ನಿವಾರಿಸಬೇಕು ಎನ್ನುವ ವಿಷಯ ಗಮನದಲ್ಲಿದೆ. ಮತ್ತೆ ಅಧಿಕಾರಿಗಳಿಗೆ ಕೂಡ ಆದೇಶ ಕೊಟ್ಟಿದ್ದೇವೆ, ಎರಡು ಇಲಾಖೆಯವರು ಕೂಡಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಪ್ರಭಾಕರ್ ತೇಲ್ಕರ್.—ನಮ್ಮ ಗುಲ್ಬರ್ಗದಲ್ಲಿ ಡ್ರೈನೇಜ್ ಸರಿಯಾಗುವವರೆಗೆ ಈ ಸೊಳ್ಳೆಗಳ ಹಾವಳಿಯನ್ನು ತಡೆಯಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಎಷ್ಟು ವರ್ಷದಲ್ಲಿ ಡ್ರೈನೇಜ್‌ನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಾರೆ ?

ಶ್ರೀ ಧರ್ಮಸಿಂಗ್.—ಈಗಾಗಲೇ ಡ್ರೈನೇಜ್‌ಗೆ ೧೭ ಲಕ್ಷ ಖರ್ಚಾಗಿದೆ ೮೦ ಪರ್ಸೆಂಟ್ ಕೆಲಸ ವಾಗಿದೆ. ಇನ್ನು ಉಳಿದ ಕೆಲಸವನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕೆನ್ನುವ ಆಶಯವಿದೆ.

Districts coverd by Dairy Development Corporation.

247 SRI L. T. THIMMAPPA HEGDE (Sagar).—Will the Minister for Law, Parliamentary Affairs and Animal Husbandary be pleaced to state.—

(a) the number of districts which come under the jurisdiction of the Dairy Development Corporation ;

(b) whether they are aware of the necessity of providing this facility to the rural agriculturists of Malnad area wherein there is ample scope ;

(c) action taken by them for the Development of this industry in the remaining districts;

(d) the action taken in respect of Shimoga District ?

SRI Y. RAMAKRISHNA (Minister for Law, Parliamentary Affairs and Animal Husbandary).—

(a) Eight.

(b) Yes.

(c) Indicated in Annexure 'A'.

(d) Indicated in Annexure 'B'.

ANNEXURE 'A'

(a) 5 Dairies have been established in the remaining districts. Apart from this there are Six (6) rural Dairy centres. There are 27 cold storages.

(b) To Eastablish about 1800 Primary Milk Producers Co-operative Societies in rural areas where there is scope.

(c) To provide well organised marketing facilities through Co-operative Societies to the farmers of rural areas, throughout the year to the milk produced, development of native breed, through artificial insemination giving aid for growing green grass at a lesser cost and to facilitate supply of balanced food, and production of cattles.

(d) Expansion of daires under the jurisdiction of the Corporation, Eastablishment of new dairies and balanced food factories.

(e) Establishment of four laboratories for the examination of diseases.

(f) To make use of studies and suggestions for growing of grass, protection of green vegetation and Milk Selling Market.

(g) Providing loan facilities through nationalised Banks for establishment of Hybrid Pattern Units.

ANNEXURE 'B'

(a) Scheme for distribution of 60,000 Litres more milk by this centre under 6th plan.

(b) Allotment of artificial insemination centre, cold storage centre, hybrid, foreign breed bulls. Assistance to buy female calf and to provide balanced food. Financial aid to farmers aid to farmers to grow grass in their lands.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ. —ನನ್ನ ಪ ಶ್ನೆಯ ಮೂರನೆ ಭಾಗಕ್ಕೆ ಕೊಟ್ಟಿರತಕ್ಕ ಉತ್ತರದಲ್ಲಿ ೬೦ ಸಾವಿರ ಲೀಟರ್ ಹೆಚ್ಚು ಹಾಲನ್ನು ಒನೇ ಯೋಜನೆಯಲ್ಲಿ ಕೆಲವು, ಕೆಲವು ಹಂತ ಹಂತ ಗಳಲ್ಲಿ ಒದಗಿಸುತ್ತೇವೆಂದು ಹೇಳಿದ್ದಾರೆ. ಆದರೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಈ ಬಗ್ಗೆ ಏನು ಕೆಲಸ ವಾಗಿದೆ ಯಾವ ರೀತಿ ಇಲ್ಲಿ ಅಭಿವೃದ್ಧಿಪಡಿಸುತ್ತೀರಿ ? ಜೊತೆಗೆ ಇಲ್ಲಿ ಒಳ್ಳೆಯ ಮಿಶ್ರತಳಿ ಮತ್ತು ಒಳ್ಳೆ ಒಳ್ಳೆಯ ತಳಿಯ ಹೋರಿಗಳನ್ನು ಮತ್ತು ಹಸುಗಳನ್ನು ಸಾಕಾವುದಕ್ಕೆ ನಮ್ಮ ಮಲೆನಾಡು ಪ್ರದೇಶದಲ್ಲಿ ಹಸಿರು ಹುಲ್ಲು ಮತ್ತು ಅನೇಕ ಸೌಲತ್ತುಗಳು ಇವೆ. ಆದ್ದರಿಂದ ಇದರ ಬಗ್ಗೆ ಏನು ಕಾರ್ಯಕ್ರಮ ಕೈ ಗೊಂಡಿದೆ ಅದರ ಬಗ್ಗೆ ವಿವರಗಳನ್ನು ತಿಳಿಸಬೇಕು.

† ಶ್ರೀ ವೈ. ರಾಮಕೃಷ್ಣ.—ಸ್ವಾಮಿ ಇದಕ್ಕೆ ವೆಸ್ಟರನ್ ಘಾಟ್ ಸ್ಕೀಮಿನಲ್ಲಿ ವಿನೇನು ಲಿಸ್ಟ್ ಇದೆ ಆದರ ಪ್ರಕಾರ ಎಲ್ಲವನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಸಣ್ಣ ರೈತರು, ಅತಿ ಸಣ್ಣ ರೈತರು ಈ ಭಾಗದಲ್ಲಿ ಹೆಚ್ಚು ಇದ್ದು, ಇಲ್ಲಿ ಇದರ ಅಭಿವೃದ್ಧಿಗೆ ಪೆಚ್ಚಿನ ಪ್ರೋತ್ಸಹವಿದೆ. ಜೊತೆಗೆ ಮಲೆನಾಡಿನಲ್ಲಿ ಇದನ್ನು ಅಭಿವೃದ್ಧಿಪಡಿಸಲಿಕ್ಕೆ ವಿಪುಲವಾದ ಅವಕಾಶವಿರುವುದರಿಂದ ಈ ಪ್ರದೇಶದಲ್ಲಿ ಯಾವ ಕೈಗಾರಿಕೆ ಇಲ್ಲವಾದ್ದರಿಂದ ಈ ಯೋಜನೆಯನ್ನು ಹೆಚ್ಚಿನ ಬೆಳವಣಿಗೆ ಮಾಡುವುದಕ್ಕೆ ಏನು ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ನಮ್ಮ ಹೈನುಗಾರಿಕೆ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಟ್ಟ ರೀತಿ ೧೯೭೪–೭೫ರ ಸಾಲಿನಲ್ಲಿ ಸಪ್ತ ವಾರ್ಷಿಕ ಯೋಜನೆಯಲ್ಲಿ ೮೨ರ ವರೆಗೆ ಇರುತ್ತದೆ, ೮೨ರ ಮಾರ್ಚಿಯಾದ ಮೇಲೆ ಇವೆಲ್ಲವನ್ನೂ ಅಳವಡಿಸಿಕೊಂಡು ಈಗಾಗಲೇ ೮ ಜಿಲ್ಲೆಗಳಲ್ಲಿ ಏನು ಏನು ಕಾರ್ಯಕ್ರಮ ಹಾಕಿ ಕೊಂಡಿದೆ ಅದನ್ನೆಲ್ಲಾ ಇಲ್ಲಿ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ನಂ. ೩೪೭, ೩೪೮ ಮಾನ್ಯ ಸದಸ್ಯರುಗಳು ಗೈರು ಹಾಜರಿದ್ದಾರೆ.

ಪ್ರಶ್ನೆ ನಂ. ೩೪೯ (೩೦೨) ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ

Tax paid on Production of Yarn and Cloth in Harihar Polyfibre Factory Area.

426 SRI D. T. MAYANNA (Huliyurdurga).—Will the Chief Minister be pleased to state.—

(a) whether it has come to their notice that yarn and cloth is being manufactured at the premises of Harihar polyfibre factory

(b) if so, the amount of tax paid by them to the Government ;

SRI R. GUNDU RAO (Chief Minister).—

(a) No.

(b) This question does not arise in view of the above reply.

ಶ್ರೀ ಡಿ. ಟಿ. ಮಾಯಣ್ಣ.—ಹರಿಹರ ಪಾಲಿಫೈಬರ್ ಕಾರ್ಖಾನೆಯ ಪ್ರದೇಶದಲ್ಲಿ ನೂಲು ಮತ್ತು ಬಟ್ಟೆಯನ್ನು ತಯಾರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಆದರೆ ಅಗ್ರಿಮೆಂಟ್ ಮಾಡುವಾಗ ಬಟ್ಟೆಯನ್ನು ತಯಾರು ಮಾಡಬೇಕು ಎಂದು ಅಗ್ರಿಮೆಂಟಿನಲ್ಲಿ ಕಂಡೀಷನ್ ಇದೆಯೇ ?

ಶ್ರೀ ಆರ್. ಗುಂಡೂರಾವ್.—ಅಗ್ರಿಮೆಂಟ್ ಕಂಡೀಷನ್ ಪ್ರಕಾರ ಅವರು ಬಟ್ಟೆ ಮತ್ತು ನೂಲನ್ನು ತಯಾರು ಮಾಡುತ್ತಿಲ್ಲ. ಆದರೆ ಅವರು ಅಗ್ರಿಮೆಂಟ್ ಪ್ರಕಾರ ಗ್ರೇ ಲಿನನ್ ರಾಮೆಟೀರಿಯಲ್ಸ್ ತಯಾರು ಮಾಡುತ್ತಾರೆ.

ಶ್ರೀ ಡಿ. ಟಿ. ಮಾಯಣ್ಣ.—ಹಿಂದಿನ ಸರ್ಕಾರ ಇದ್ದಾಗ ಮಾಡಿಕೊಂಡಂತಹ ಅಗ್ರಿಮೆಂಟಿನಲ್ಲಿ ಅಲ್ಲಿ ಬಟ್ಟೆಯನ್ನು ತಯಾರು ಮಾಡಬೇಕು ಎಂದು ಕಂಡೀಷನ್ ಇದೆಯೇ ಅಥವಾ ನೂಲು ಮಾತ್ರ ಪರದೇಶಕ್ಕೆ ಕಳುಹಿಸಬೇಕು ಎಂದು ಕಂಡೀಷನ್ ಇದೆಯೇ ?

ಶ್ರೀ ಆರ್. ಗುಂಡೂರಾವ್.—ಆ ಅಗ್ರಿಮೆಂಟ್ ಕಂಡೀಷನ್‌ನಲ್ಲಿ ಇದೇ ತರಹ ಮಾಡಬೇಕು ಎಂದು ಕಂಡೀಷನ್ ಹಾಕಿಲ್ಲ.

ಶ್ರೀ ಡಿ. ಟಿ. ಮಾಯಣ್ಣ.—ಅವರು ಈ ಬಗ್ಗೆ ಸರ್ಕಾರಕ್ಕೆ ತೆರಿಗೆಯನ್ನು ಕೊಡುತ್ತಿಲ್ಲ ಎಂದು ಹೇಳಿದ್ದೀರಿ, ಅವರು ತೆರಿಗೆಯನ್ನು ಕೊಡದೆ ನೂಲು ಮಾತ್ರ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಅವರು ಬೂರಕ್ಕಾಗಿ ನಮ್ಮ ಅರಣ್ಯವನ್ನು ಕಡಿದು ಹಾಳು ಮಾಡುತ್ತಿದ್ದಾರೆ. ಆದ್ದರಿಂದ ಕಂಡೀಷನ್ ಪ್ರಕಾರ ಇಲ್ಲಿಯೇ ಬಟ್ಟೆಯನ್ನು ತಯಾರು ಮಾಡಬೇಕು ಎಂದು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ತಪ್ಪು ಕಂಡೀಷನ್ ಹಾಕಿ ಆ ಪಾಲಿಫೈಬರ್ ಫ್ಯಾಕ್ಟರಿಯವರಿಗೆ ಹೇಳ ಬೇಕು. ರೈತ ಕಬ್ಬು ಬೆಳೆದರೆ ಅದಕ್ಕೆ ಸರ್ಕಾರದವರು ತೆರಿಗೆ ಹಾಕುತ್ತಾರೆ. ರೈತ ಕೋಳಿ ಮೊಟ್ಟೆ ಉತ್ಪಾದನೆ ಮಾಡಿದರೆ ಅದಕ್ಕೆ ತೆರಿಗೆಯನ್ನು ಹಾಕುತ್ತಾರೆ. ಆದರೆ ಈ ಫ್ಯಾಕ್ಟರಿಯವರು ಬಟ್ಟೆಯನ್ನು